“ನಿನಗೆ ದುಡ್ಡಿನ ಮದ ಜಾಸ್ತಿಯಾಗಿರುವಂತೆ ಕಾಣಿಸುತ್ತಿದೆ ಬವ್ತೀಸ!...” ಗುರುಗಳು ಹೇಳಿದರು. ಅವರ ದನಿಯಲ್ಲಿ ಸಿಟ್ಟು ಎದ್ದು ಕಾಣುತ್ತಿತ್ತು. ಗುರುಗಳ ಹೊಸ ನಿವಾಸದಲ್ಲಿ ಜೋಡಿಸಿಟ್ಟಿದ್ದ ಹೊಚ್ಚ ಹೊಸ ಕುರ್ಚಿಗಳು ಖಾಲಿ ಹೊಡೆಯುತ್ತಿದ್ದರೂ ಅವನಿಗೆ ಕುಳಿತುಕೊಳ್ಳಲು ಗುರುಗಳು ಹೇಳಲಿಲ್ಲ.

“ನೀನು ನನ್ನ ಎದುರಿಗೆ ಈಗ ನಿಂತಿರುವ ಭಂಗಿಯೇ ಸಾರುತ್ತಿದೆ... ಚೆನ್ನಾಗಿ ದುಡ್ಡು ಸೇರುತ್ತಿರಬೇಕು, ಅಲ್ವಾ ಬವ್ತೀಸ?”

ಬವ್ತೀಸ ಉತ್ತರಿಸಲಿಲ್ಲ.

“ಈಗ ನಿನ್ನ ಮಕ್ಕಳ ಫೀಜಿನ ಬಗ್ಗೆ ಈಗ ಯಾವುದೇ ತಕರಾರುಗಳಿಲ್ಲವೆಂದು ಕೇಳಿದ್ದೇನೆ. ಒಳ್ಳೇದು...”

“ಹೌದು ಗುರುಗಳೆ...” ಬವ್ತೀಸ ಹೇಳಿದ.

“ನೀನು ಇಗರ್ಜಿಯ ಗುರು ನಿವಾಸಕ್ಕೆಂದು ಕೊಟ್ಟು ಕಳುಹಿಸಿದ ದೇಣಿಗೆಯನ್ನು ನಾನು ಸ್ವೀಕರಿಸಲಿಲ್ಲ, ಬವ್ತೀಸ. ಈ ಪವಿತ್ರ ನಿವಾಸಕ್ಕೆ ಆ ಹಣದ ಅಗತ್ಯವಿಲ್ಲವೆಂದು ವಾಪಸ್ಸು ಕಳಿಸಿದೆ. ನಮ್ಮ ನೈಜ ಭಕ್ತರು ಕೊಟ್ಟ ಕಾಣಿಕೆಯೇ ಬೇಕಾದಷ್ಟಾಯಿತು! ನಿನ್ನ ಬಳಿ ಈಗ ಹಣದ ಹೊಳೆಯೇ ಹರಿಯುತ್ತಿದೆ ಎಂದು ಕೇಳಿದ್ದೇನೆ... ಇರಲಿ.”

“ಆ ದೇವರ ದಯೆಯಿಂದ ಈಗ ವ್ಯಾಪಾರ ಚೆನ್ನಾಗಿದೆ ಗುರುಗಳೆ.”

“ಯಾರ ದೇವರು ಬವ್ತೀಸ? ನಮ್ಮ ದೇವರೋ, ಇಲ್ಲಾ ಅವರ ದೇವರು?... ಮೂರು ಕಾಸಿಗಾಗಿ ನಮ್ಮ ದೇವರನ್ನೂ ಮಾರಿಬಿಟ್ಟೆಯಲ್ಲ ಬವ್ತೀಸ?...” ಗುರುಗಳು ಸಿಟ್ಟಿನಿಂದ ಹೇಳಿದರು. “ನಮ್ಮ ಇಗರ್ಜಿಯ ಭಕ್ತರೆಲ್ಲಾ ಇದೇ ವಿಚಾರ ಮಾತನಾಡುತ್ತಿದ್ದಾರೆ. ಸಮಾಜದೊಳಗೆ ನಾವೆಲ್ಲಾ ತಲೆ ಎತ್ತಿ ಓಡಾಡದಂತೆ ಮಾಡಿಬಿಟ್ಟೆಯಲ್ಲ, ಬವ್ತೀಸ?”

ಗುರುಗಳ ಆರೋಪದಿಂದಾಗಿ ಬವ್ತೀಸನೇನೂ ವಿಚಲಿತನಾಗಲಿಲ್ಲ.

“ಅಂತಹದ್ದೇನಾಯಿತು ಫಾದರ್? ನೀವೇ ಹೇಳಿದ್ದೀರಿ... ನಾನು ಇಮಾಜುಗಳನ್ನಷ್ಟೇ ಮಾರುತ್ತಿರುವುದು, ದೇವರನ್ನಲ್ಲ... ದೇವರು ನಮ್ಮ ಹೃದಯದಲ್ಲಿರಬೇಕು ಎಂದು! ನಾನೂ ಹಾಗೆಯೇ ಭಾವಿಸಿದ್ದೇನೆ ಫಾದರ್. ಅದರಂತೆಯೇ ನನ್ನ ಹಣಕಾಸಿನ ಸಮಸ್ಯೆಗಳೆಲ್ಲವೂ ಪರಿಹಾರವಾಗಿವೆ.”

ಧರ್ಮಗುರುಗಳು ಅಸಹನೆಯಿಂದ ಕುದಿಯತೊಡಗಿದರು. “ನೀನು ಮಾಡುತ್ತಿರುವುದು ಸರಿಯಲ್ಲ ಬವ್ತೀಸ, ಖಂಡಿತ ಸರಿಯಲ್ಲ! ಇಮಾಜುಗಳು ಖರ್ಚಾಗುತ್ತಿಲ್ಲವೆಂದು ನೀನು ಮೂರ್ತಿಗಳ ತಯಾರಿಕೆಯಲ್ಲಿ ತೊಡಗಿಸಿಕೊಂಡೆ. ಈಗ ನಿನ್ನ ಹೇಸಿಗೆ ಕೃತ್ಯವನ್ನು ತರ್ಕದಿಂದ ಸರಿಪಡಿಸಲು ಹೆಣಗಾಡುತ್ತಿದ್ದೀಯ! ನೀನು ನಮ್ಮ ಕ್ರೈಸ್ತ ಸಮುದಾಯದೊಳಗೆ ಒಂದು ಕಪ್ಪು ಚುಕ್ಕೆಯಂತೆ ಬಾಳುವೆ ನಡೆಸುತ್ತಿದ್ದೀಯ.”

ಗುರುಗಳ ಪ್ರಶ್ನೆಗಳಿಗೆ ಉತ್ತರ ಅವನ ಹೃದಯದಿಂದ ಮತ್ತು ಮನದಾಳದಿಂದ ಹೊರಬರಲು ಹಾತೊರೆಯುತ್ತಿತ್ತು. “ಫಾದರ್, ನಾನು ಇಮಾಜುಗಳನ್ನಷ್ಟೇ ಮಾರುತ್ತಿರುವುದು, ದೇವರನ್ನಲ್ಲವೆಂದು ನೀವು ನನಗೆ ಹೇಳಿದ್ದೀರಿ. ಸುಳ್ಳು ಭರವಸೆಗಳನ್ನು ಕೊಳ್ಳುವುದು, ಮಾರುವುದು ದೇವರ ಮೇಲಿನ ನಿಜವಾದ ವಿಶ್ವಾಸವಲ್ಲ, ಅದು ವ್ಯಾಪಾರ ಎಂದಿದ್ದೀರಿ. ಅದು ನಿಜವೂ ಹೌದು. ಈ ಮೊದಲು ನಾನು ಇಮಾಜುಗಳೆಂದು ಮಾರುತ್ತಿರಲಿಲ್ಲ. ದೇವರು ಎಂದು, ಸಂತರೆಂದು ಮಾರುತ್ತಿದ್ದೆ. ನನ್ನ ಮನೆಯಲ್ಲಿ ಇಮಾಜುಗಳ ರಾಶಿಯೇ ಇತ್ತು. ಮಣ್ಣಿಂದ ತಯಾರಿಸಿದ ಈ ಇಮಾಜುಗಳು ಪವಿತ್ರವೆಂದೇ ಅವುಗಳಿಗೆ ಭಕ್ತಿಪೂರ್ವಕವಾಗಿ ನಮಿಸುತ್ತಿದ್ದೆ. ನಾನೇ ತಯಾರಿಸಿದ ಇಮಾಜುಗಳ ಮುಂದೆ ಭಕ್ತಿಯಿಂದ ತಲೆ ಬಾಗಿಸಿ ನನ್ನ ಸಂಕಷ್ಟಗಳನ್ನು ಪರಿಹರಿಸಲು ಬೇಡಿಕೊಳ್ಳುತ್ತಿದ್ದೆ.